# <u>ಡೊಂಕು ಬಾಲದ ನಾಯಕರೆ</u>

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Note:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The lyrics given without highlights are as per Ref. 1. The wordings given yellow highlights are as per Ref. 2. In Ref. 3, the lyrics are almost similar to that of Ref. 2 and these are not considered here.
5. **Note:** The lyrics followed by the singer almost matches with Ref. 2.

ರಾಗ: ನವರೋಜು ತಾಳ: ಆದಿ

| | |
|---|---|
| ಡೊಂಕು ಬಾಲದ ನಾಯಕರೇ | ಡೊಂಕು ಬಾಲದ ನಾಯಕರೇ |
| ನೀವೇನೇನೂಟವ ಮಾಡಿದಿರಿ ‖ ಪ ‖ | ನೀವೇನೂಟವ ಮಾಡಿದಿರಿ |
| | |
| ಕಣಕ ಕುಟ್ಟೋವಲ್ಲಿಗೆ ಹೋಗಿ | ಕಣಕ ಕುಟ್ಟೋ ಅಲ್ಲಿಗೆ ಹೋಗಿ |
| ಹಣಿಕಿ ಇಣಿಕಿ ನೋಡುವಿರಿ | ಹಣಿಕಿ ಇಣಿಕಿ ನೋಡುವಿರಿ |
| ಕಣಕ ಕುಟ್ಟೋ ಒನಕಿಯಲೊಗೆದರೆ | ಕಣಕ ಕುಟ್ಟೋ ಒನಕೆಲಿ ಬಡಿದರೆ |
| ತಿಣುಕುತ ರಾಗವ ಮಾಡಿದಿರಿ ‖ ೧ ‖ | ಕುಂಯಿ ಕುಂಯಿ ರಾಗವ ಹಾಡುವಿರಿ |
| | |
| ಹುಗ್ಗಿ ಮಾಡೋವಲ್ಲಿಗೆ ಹೋಗಿ | ಹುಗ್ಗಿ ಮಾಡೋ ಅಲ್ಲಿಗೆ ಹೋಗಿ |
| ತಗ್ಗಿ ಬಗ್ಗಿ ನೋಡುವಿರಿ | ತಗ್ಗಿ ಬಗ್ಗಿ ನೋಡುವಿರಿ |
| ಹುಗ್ಗಿ ಮಾಡುವ ಸವಟಿಲಿ ಬಡಿದರೆ | ಹುಗ್ಗಿ ಮಾಡೋ ಸೌಟಲಿ ಬಡಿದರೆ |
| ಕುಂಯ್ ಕುಂಯ್ ರಾಗವ ಮಾಡುವಿರಿ ‖ ೨ ‖ | ಕುಂಯಿ ಕುಂಯಿ ರಾಗವ ಮಾಡುವಿರಿ |
| | |
| ಹಿರೇ ಬೀದಿಯಲಿ ಓಡುವಿರಿ | ಹಿರೇ ಬೀದಿಯಲಿ ಓಡುವಿರಿ |
| ಕರೇ ಬೂದಿಯಲಿ ಹೊರಳುವಿರಿ | ಕರೇ ಬೂದಿಯಲಿ ಹೊರಳುವಿರಿ |

ಪುರಂದರ ವಿಠ್ಠಲ ರಾಯನ ಈ ಪರಿ
ಮರೆತು ಸದಾ ನೀವು ತಿರುಗುವಿರಿ || ೩ ||

ಪುರಂದರ ವಿಠ್ಠಲ ರಾಯನ ಈ ಪರಿ
ಮರೆತು ಸದಾ ನೀವ್ ಚರಿಸುವಿರಿ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನಿತ್ಯಯಾತ್ರೆಯ ಒಂದು ಸಂದರ್ಭದಲ್ಲಿ ಅನ್ನಕ್ಕಾಗಿ ಅಲೆದಾಡುವ ಬೀದಿ ನಾಯಿಗಳನ್ನು ನೋಡಿ ಈ ಪದ ಹೊರಹೊಮ್ಮಿತ್ತೆಂದು ತೋರುತ್ತದೆ. ಸಾಮಾನ್ಯ ಮನುಷ್ಯರಿಗೂ ಈ ನಾಯಿಗಳಿಗೂ ಇರುವ ಸಾದೃಶ್ಯ ಅವರಿಗೆ ತಟಕ್ಕನೆ ತೋರಿಕೊಂಡಿತು. ಆದ್ದರಿಂದ ಈ ನಾಯಿಗಳನ್ನು ಮಾರ್ಮಿಕವಾಗಿ 'ನಾಯಕರೆ'ಂದು ಕರೆದಿದ್ದಾರೆ. ಅಧಿಕಾರವನ್ನು ಮೆರೆಸುತ್ತ, ಅನ್ನಕ್ಕಾಗಿ ಹಂಬಲಿಸುವ ನಾಯಕರೂ ದಿಟವಾಗಿ ನಾಯಿಗಳೇ ಎಂದು ದಾಸರ ಆಶಯ.

**ಕಣಕ ಕುಟ್ಟೋ...** – ಕಣಕ (ಕಣುಕ) ಎಂದರೆ ಹಿಟ್ಟು, ಸಾಮಾನ್ಯವಾಗಿ ಗೋಧಿಯ ಹಿಟ್ಟು.

**ಹಣಕಿ** – ಕಳ್ಳತನದಲ್ಲಿ ನೋಡುವುದು.

**ಹಿರೇಬೀದಿ** – ದೊಡ್ಡಹಾದಿ, ರಾಜಮಾರ್ಗ.

**Classification:** Keerthane
**Ankita:** purandara vittala
**Location:** NA
**Category:** jeevana darshana
**Sub-Category:** nayaka, rajakarani, oota, nayi, huggi, dari, donku,
**Pravachana:** NA
**Explanation:** NA